

# ನಕ್ಕುಬಿಡಿ

**ನ್ಯಾಯಾಧೀಶ:** ನೀನು ಅವರ ಹಣ ದೋಚಿದ್ದು ನಿಜ ತಾನೇ?
**ಅಪರಾಧಿ:** ಇಲ್ಲ ಸ್ವಾಮಿ, ಅವರೇ ನನಗೆ ಕೊಟ್ಟರು.
**ನ್ಯಾಯಾಧೀಶ:** ಹೌದಾ, ಅವರೇಕೆ ನಿನಗೆ ಹಣ ಕೊಟ್ಟರು?
**ಅಪರಾಧಿ:** ಅವರ ಎದೆಗೆ ಗುರಿ ಮಾಡಿ ರಿವಾಲ್ವರ್ ತೋರಿಸಿದೆ ಅಷ್ಟೇ ಸ್ವಾಮಿ.

***

**ಗೋಪಾಲ:** ಮುಕುಂದ ನಿನ್ನ ಮಗಳ ಮದುವೆಯೇಕೆ ಮತ್ತೆ ಮತ್ತೆ ಮುಂದೆ ಹೋಗ್ತಾ ಇದೆ?
**ಮುಕುಂದ:** ಏನು ಹೇಳಲಿ ಗೋಪಾಲ, ನಮ್ಮ ಭಾವಿ ಅಳಿಯ ಸ್ವಲ್ಪ ಮುಂದೂಡುವ ಸ್ವಭಾವದವನು. ಅದೇ ಅಭ್ಯಾಸ ಬಲದಿಂದ ಮದುವೆಯನ್ನೂ ಮುಂದೂಡುತ್ತಲೇ ಇದ್ದಾರೆ.

***

**ಪತ್ನಿ:** ಅಕಸ್ಮಾತ್ ನಾನು ಸತ್ತರೆ, ಮತ್ತೊಂದು ಮದುವೆಯಾಗ್ತೀರಾ?
**ಪತಿ:** ಖಂಡಿತ ಇಲ್ಲ.
**ಪತ್ನಿ:** ಏಕೆ? ನನ್ನಂಥವರು ಮತ್ತೆ ಸಿಗುವುದಿಲ್ಲ ಅಂತ ಭಯನಾ?
**ಪತಿ:** ಹಾಗೇನಿಲ್ಲ, ಮತ್ತೆ ನಿನ್ನಂಥವಳೇ ಸಿಕ್ಕಿಬಿಟ್ರೆ ಅನ್ನುವ ಭಯ.

***




ಪಾಪ ತುಂಬಾ ನಷ್ಟದಲ್ಲಿ ನಡೆಸ್ತಿದಾರೆ ಕಣೇ. ಅದಕ್ಕೇ...

**ಪತಿ:** ಲಲಿತಾ ನೀನು ಈಗ ಬಡಿಸಿದ ತಿಂಡಿಯ ಹೆಸರೇನು?
**ಲಲಿತಾ:** ಯಾಕೆ ನೀವು ಹೀಗೆ ಕೇಳ್ತಾ ಇದ್ದೀರಿ?
**ಪತಿ:** ಇದನ್ನು ತಿಂದು ಸತ್ತ ಮೇಲೆ, ನರಕಕ್ಕೊ ಅಥವಾ ಸ್ವರ್ಗಕ್ಕೊ ಹೋಗ್ತೀನಿ. ಅಲ್ಲಿನವರು ಏನು ತಿಂದು ಇಲ್ಲಿಗೆ ಬಂದೆ ಅಂದಾಗ ಹೇಳಬೇಕಲ್ವಾ ಅದಕ್ಕೆ.

***

**ಯುವಕ:** ಪ್ರಿಯೆ ನಿನ್ನನ್ನು ನನ್ನ ಚೂರಾದ ಹೃದಯದಿಂದ ಪ್ರೀತಿಸಲಾ ಅಥವಾ ಹೃದಯ ಚೂರಾಗುವ ತನಕ ಪ್ರೀತಿಸಲಾ?
**ಯುವತಿ:** ಹೌದಾ, ಈಗ ನಾನು ಕೈಗೆ ಚಪ್ಪಲಿ ತೆಗೆದುಕೊಳ್ಳಲಾ, ಇಲ್ಲ ಚಪ್ಪಲಿ ಕಿತ್ತೋಗುವ ತನಕ ಬಾರಿಸಲಾ.

***

**ನಾಣಿ:** ಕೇಶವ ನೀನು ಆ ನರ್ಸ್ ಅನ್ನು ಮದುವೆಯಾದೆಯಲ್ಲ, ಹೇಗಿದೆ ಜೀವನ?
**ಕೇಶವ:** ಏನು ಹೇಳಲಿ ನಾಣಿ, ಆಕೆಯನ್ನು ನಾನು 'ಸಿಸ್ಟರ್' ಎಂದಾಗಲೇ ನನ್ನ ಕಡೆ ನೋಡೋದು.

***

**ಆತ:** ಸಾರ್, ನೀವು ಎರಡು ಸಿನಿಮಾಗಳಲ್ಲಿ ನಾಯಕ ನಟ ಅಂತ ಹೇಳಿದ್ರಿ, ಅವುಗಳನ್ನು ನಾನು ನೋಡಿದ ನೆನಪಿಲ್ಲವಲ್ಲ?
**ನಟ:** ನೀವು ಹೇಳ್ತಾ ಇರೋದು ಸರಿ, ಒಂದು ಸಿನಿಮಾ ಇನ್ನೂ ಚರ್ಚೆಯಲ್ಲಿದೆ, ಮತ್ತೊಂದು ಇನ್ನೂ ಡಬ್ಬದಲ್ಲಿಯೇ ಇದೆ.

***

**ಗೌರಮ್ಮ:** ಪಂಕಜ, ಆ ಹೆಂಗಸರು ಮೊನ್ನೆ ತಾನೇ ಜಗಳ ಮಾಡಿದ್ದರು. ಇವತ್ತು ಕೂಡ ಜಗಳ ಮಾಡ್ತಾ ಇದ್ದಾರಲ್ಲ?
**ಪಂಕಜ:** ಹೌದು ಮೊನ್ನೆ ಲೀಗ್ ಮ್ಯಾಚ್, ಇವತ್ತು ಫೈನಲ್ ಮ್ಯಾಚ್.

***

**ಕಮಲಮ್ಮ:** ಜಾನಕಿ, ನಿಮ್ಮವರು ನಿನ್ನ ಪಾದ ಮುಟ್ಟಿ ಇನ್ನು ಕುಡಿಯೋದಿಲ್ಲ ಅಂತ ಪ್ರಮಾಣ ಮಾಡಿದ್ರು ಅಂದೆ ಅಲ್ವಾ? ಈಗ ಕುಡಿಯೋದನ್ನು ಬಿಟ್ಟಿದ್ದಾರಾ?
**ಜಾನಕಿ:** ಇಲ್ಲ ಕಮಲಮ್ಮ, ಅವರು ನನ್ನ ಪಾದ ಹಿಡಿದುಕೊಂಡಾಗ ಕಂಡ ಕಾಲುಂಗುರವನ್ನೇ ಮಾಯಮಾಡಿಬಿಟ್ಟಿದ್ದಾರೆ.

–ಶಂಕರೇಗೌಡ ತುಂಬಕೆರೆ, ಮಂಡ್ಯ

